

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ವಿಭೂತಿ/ನಾಮದ ಬಲ ಒಂದಿದ್ದರೆ ಸಾಕು!.....

ಒಮ್ಮೆ ಹೈದರಾಬಾದಿನ ಶಿಷ್ಯರೊಬ್ಬರು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಬಸ್ಸು ನಿಲ್ದಾಣದಿಂದ ಹೊರಟು ನಗರದ ಹೊರವಲಯ ತಲುಪುತ್ತಿದ್ದಂತೆಯೇ ನಿಂತಿತು. ಬಸ್ಸಿನ ಕಂಡಕ್ಟರ್ ಪ್ರತಿಯೊಬ್ಬ ಪ್ರಯಾಣಿಕರ ಹತ್ತಿರ ಹೋಗಿ ಟಿಕೆಟ್ಟುಗಳನ್ನು ತಪಾಸಣೆ ಮಾಡತೊಡಗಿದ. ಹೈದರಾಬಾದಿನ ಆ ನಮ್ಮ ಶಿಷ್ಯರ ಹತ್ತಿರ ಬಂದಾಗ ಮಾತ್ರ ಕಂಡಕ್ಟರ್ ಅದೇಕೋ ಏನೋ ಕತ್ತೆತ್ತಿ ಕ್ಷಣಕಾಲ ಅವರ ಮುಖವನ್ನು ದಿಟ್ಟಿಸಿ ನೋಡಿ ತಪಾಸಣೆ ಮಾಡದೆ ಮುಂದಕ್ಕೆ ಹೋದನಂತೆ. 'ಎಲ್ಲರ ಟಿಕೆಟ್ ತಪಾಸಣೆ ಮಾಡಿದ ನೀನು ನನ್ನ ಟಿಕೆಟ್ಟನ್ನು ಏಕೆ ತಪಾಸಣೆ ಮಾಡಲಿಲ್ಲ' ಎಂದು ಅವರು ಕುತೂಹಲದಿಂದ ಕೇಳಿದರಂತೆ. ಅದಕ್ಕೆ ಕಂಡಕ್ಟರ್ ಕೊಟ್ಟ ಉತ್ತರವೆಂದರೆ: "ನಿಮ್ಮ ಹಣೆಯ ಮೇಲೆ ವಿಭೂತಿ ಇದೆ, ನೀವು ಶಿವಭಕ್ತರಿದ್ದೀರಿ, ಆದ್ದರಿಂದ ನೀವು ತಪ್ಪದೆ ಟಿಕೆಟ್ ತೆಗೆದುಕೊಂಡಿರುತ್ತೀರಿ" ಎಂಬ ನಂಬುಗೆಯಿಂದ ತಪಾಸಣೆ ಮಾಡದೆ ಮುಂದಕ್ಕೆ ಹೋದೆನೆಂದು ಹೇಳಿದನಂತೆ!.... ಆ ಕಂಡಕ್ಟರ್‌ನ ಧಾರ್ಮಿಕ ನಂಬುಗೆಯನ್ನು ಮೆಚ್ಚಬಹುದಾದರೂ ಅವನ ನಂಬುಗೆಯಂತೆ ಎಲ್ಲ ಜನರೂ ಇರುತ್ತಾರೆಂದು ನಂಬಲು ಸಾಧ್ಯವಿಲ್ಲ. ಇನ್ನುಮುಂದೆ ಪ್ರತಿನಿತ್ಯ ಯಾವ ಬಸ್ಸಿನಲ್ಲಿ ಆ ಕಂಡಕ್ಟರ್ ಇರುತ್ತಾನೆಂದು ಗೊತ್ತಾದರೆ ಸಾಕು ಪ್ರಯಾಣಿಕರು ಯಾವ ಧರ್ಮದವರಾದರೇನಂತೆ ಅವರ ಹಣೆಯ ಮೇಲೆ ವಿಭೂತಿ ರಾರಾಜಿಸುವುದರಲ್ಲಿ ಸಂಶಯವಿಲ್ಲ! ಯಾವ ಗುರುಗಳೂ ಶಿಷ್ಯರಿಗೆ ವಿಭೂತಿ ಧರಿಸಿಕೊಳ್ಳಿ ಎಂದು ಉಪದೇಶಿಸುವ ಅಗತ್ಯವೇ ಇರುವುದಿಲ್ಲ. ಪ್ರಾತಃಕಾಲ ದೇವರ ಪೂಜೆ ಮಾಡಲಿ ಬಿಡಲಿ, ಪ್ರಯಾಣಕ್ಕೆ ಮುಂಚೆ ವಿಭೂತಿ ಧರಿಸುವುದನ್ನು ಮಾತ್ರ ಯಾರೂ ಮರೆಯಲಾರರು! ಅವರಿಗೆ ವಿಭೂತಿ ಉಂಡೆಯೇ ಫ್ರೀ ಬಸ್‌ಪಾಸ್ ಆದರೆ ಆಶ್ಚರ್ಯಪಡಬೇಕಾಗಿಲ್ಲ.

ಹೀಗೆ ಬಸವಣ್ಣನವರೂ ಸಹ ಒಂದು ಹಂತದಲ್ಲಿ ಹಣೆಯ ಮೇಲೆ ವಿಭೂತಿ ಧರಿಸಿದವರನ್ನೆಲ್ಲಾ, ಕೊರಳಲ್ಲಿ ಲಿಂಗ ಧರಿಸಿದವರನ್ನೆಲ್ಲಾ ಯಾವ ಅನುಮಾನವೂ ಇಲ್ಲದೆ ನಂಬುತ್ತಿದ್ದರೆಂದು ಈ ಕೆಳಗಿನ ವಚನಗಳಿಂದ ತಿಳಿದು ಬರುತ್ತದೆ:

**ಅಡ್ಡ ತ್ರಿಪುಂಡ್ರದ ಮಣಿಮುಕುಟದ ವೇಷದ**
**ಶರಣರ ಕಂಡಡೆ ನಂಬುವುದೆನ್ನ ಮನವು**
**ನಚ್ಚುವುದೆನ್ನ ಮನವು ಸಂದೇಹವಿಲ್ಲದೆ...**

**ಎಡದ ಕೈಯಲ್ಲಿ ಕತ್ತಿ, ಬಲದ ಕೈಯಲಿ ಮಾಂಸ,**
**ಬಾಯಲ್ಲಿ ಸುರೆಯ ಗಡಿಗೆ, ಕೊರಳಲ್ಲಿ ದೇವರಿರಲು**
**ಅವರ ಲಿಂಗನೆಂಬೆ, ಸಂಗನೆಂಬೆ**
**ಕೂಡಲಸಂಗಮ ದೇವಾ,**
**ಅವರ ಮುಖಲಿಂಗಿಗಳೆಂಬೆನು!**

ಬಸವಣ್ಣನವರ ಈ ಭಾವುಕತೆಯನ್ನು ಅನೇಕರು ದುರುಪಯೋಗಪಡಿಸಿಕೊಂಡಂತೆ ತೋರುತ್ತದೆ. ಹಣೆಯ ಮೇಲೆ ವಿಭೂತಿ ಧರಿಸಿ, ಕೊರಳಲ್ಲಿ ಲಿಂಗವನ್ನು ಕಟ್ಟಿಕೊಂಡು ಬಸವಣ್ಣನವರನ್ನೇ ಮೋಸಗೊಳಿಸಿದ ಕಳ್ಳರು ಆಗಿನ ಕಾಲದಲ್ಲೂ ಇದ್ದರು ಎಂಬ ಸಂಗತಿಯನ್ನು ಅವರ ವಚನಗಳಿಂದಲೇ ತಿಳಿಯಬಹುದಾಗಿದೆ. ರಾತ್ರಿಹೊತ್ತು ಮನೆ ನುಗ್ಗಿ ಬಸವಣ್ಣನವರ ಧರ್ಮಪತ್ನಿ ನೀಲಾಂಬಿಕೆಯ ಮೈಮೇಲಿನ ಆಭರಣಗಳನ್ನು ಕದಿಯಲು ಪ್ರಯತ್ನಿಸಿದ ಕಳ್ಳನೊಬ್ಬ ಸಿಕ್ಕಿಬೀಳುತ್ತಾನೆ. ಆತ ಕಳ್ಳನೆಂದು ಗೊತ್ತಾದಮೇಲೂ ಅವಶ್ಯಕತೆಗಿಂತ ಹೆಚ್ಚು ಸಂಗ್ರಹಿಸಿಟ್ಟುಕೊಂಡ ತಾನೇ ದೊಡ್ಡ ಕಳ್ಳನೆಂದು ಬಸವಣ್ಣನವರು ಆತನ್ನಿಂದನೆ ಮಾಡಿಕೊಳ್ಳುತ್ತಾರೆ. 'ಸದುವಿನಯವೇ ಸದಾಶಿವನೊಲುಮೆಯಯ್ಯಾ'

ಎನ್ನುವ ಮೃದುಭಾಷಿ ಬಸವಣ್ಣನವರು ಬಾಯಿತಪ್ಪಿ ಹೆಂಡತಿಯನ್ನು 'ಚಾಂಡಾಲಗಿತ್ತಿ' ಎಂದು ಗದರಿಸಿ ಅವಳ ಮೈಮೇಲಿರುವ ಒಡವೆಗಳನ್ನು ಕಳ್ಳನಿಗೆ ಒಪ್ಪಿಸಲು ಆಗ್ರಹಪಡಿಸುತ್ತಾರೆ:

**ತೆಗೆದುಕೊಡಾ ಎಲೆ ಚಾಂಡಾಲಗಿತ್ತಿ**
**ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ**
**ಕೂಡಲಸಂಗಮ ದೇವನಲ್ಲದೆ ಆರೂ ಇಲ್ಲ.**

ಇದು ಪ್ರಕ್ಷಿಪ್ತ ವಚನ, ಈ ರೀತಿ ಯಾವ ಘಟನೆಯೂ ನಡೆದಿರಲಾರದು, ಇದು ಪುರಾಣಕಾರರು ಮತ್ತು ನಾಟಕದ ಕಂಪನಿಯವರು ಮಾಡಿಕೊಂಡ ಪರಿಕಲ್ಪನೆ ಎನ್ನುವವರಿದ್ದಾರೆ. ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿದ್ದಾಗ ತನ್ನ ಸಹಧರ್ಮಿಣಿ ಕಸ್ತೂರಿಬಾ ಶೌಚಾಲಯವನ್ನು ಸ್ವಚ್ಛಗೊಳಿಸಲು ನಿರಾಕರಿಸಿದಳೆಂಬ ಕಾರಣಕ್ಕಾಗಿ ಕೋಪಗೊಂಡು ಮನೆಯಿಂದ ಹೊರಹಾಕಲು ಯತ್ನಿಸಿದ್ದನ್ನು ನೆನೆಸಿಕೊಂಡರೆ ಬಸವಣ್ಣನವರ ಜೀವನದಲ್ಲಿ ಇಂತಹ ಒಂದು ಘಟನೆ ನಡೆದಿಲ್ಲವೆಂದು ಹೇಳಲಾಗದು. ಒಂದು ಧ್ಯೇಯ ಮತ್ತು ಗುರಿಯನ್ನು ಜೀವನದಲ್ಲಿರಿಸಿಕೊಂಡು ಅದರಂತೆ ಬಾಳಲು ಪ್ರಾಮಾಣಿಕ ಪ್ರಯತ್ನ ಮಾಡುವ ತತ್ವಜೀವಿಗಳ ಚಿಂತನೆ ಮತ್ತು ವರ್ತನೆ ಲೌಕಿಕ ಜನರಂತೆ ಇರುವುದಿಲ್ಲ. "ಇಂತು, ವಿಶ್ವಾಸದಿಂ ಭಕ್ತನಾಗಿ, ಆ ವಿಶ್ವಾಸದೊಳಗಣ ನಿಷ್ಠೆಯಿಂ ಮಾಹೇಶ್ವರನಾಗಿ...." ಎಂದು 'ಶೂನ್ಯಸಂಪಾದನೆ'ಯು ವಿಶ್ಲೇಷಿಸಿರುವಂತೆ ಆರಂಭದ ನಂಬುಗೆ ಅಥವಾ ವಿಶ್ವಾಸವು ಕ್ರಮೇಣ ಬಲಿತು ನಿಷ್ಠೆಯಾಗಿ ಸ್ವಾನುಭವಕ್ಕೆ ಬಂದಾಗ ಆಗುವ ಪರಿಣಾಮವೇ ಬೇರೆ. ಅದು ಅನುಭವದ ಮೂಸೆಯಲ್ಲಿ ಪಾಕಗೊಂಡು ವಿವೇಕವಾಗಿ ನಂತರ ಅರಿವಾಗಿ ರೂಪುಗೊಂಡಾಗ ಹೊರಹೊಮ್ಮಿದ ಮಾತುಗಳು ಹೀಗಿವೆ:

**ಒಲೆಯ ಬೂದಿಯ ಬಿಲಿಯಲು ಬೇಡ,**
**ಒಲಿದಂತೆ ಹೂಸಿಕೊಂಡಿಪ್ಪುದು**
**ಹೂಸಿ ಏನು ಫಲ ಮನದಲ್ಲಿ ಲೇಸಿಲ್ಲದನ್ನಕ್ಕ!**

**ಲಾಂಛನಕ್ಕೆ ಶರಣೆಂಬೆ**
**ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದಿದ್ದಡೆ**
**ಕೂಡಲಸಂಗಮದೇವಾ ನೀ ಸಾಕ್ಷಿಯಾಗಿ 'ಛೀ' ಎಂಬೆ!**

**ಒಳಗೆ ಕುಟಿಲ, ಹೊರಗೆ ವಿನಯವಾಗಿ**
**ಭಕ್ತರೆನಿಸಿಕೊಂಬವರ ಬಲ್ಲನೊಲ್ಲನಯ್ಯಾ ಲಿಂಗವು!**

ಈ ವಚನಗಳನ್ನು ಬಸವಣ್ಣನವರು ಯಾವ ಸಂದರ್ಭದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ಆದರೆ ಈ ಹಂತದಲ್ಲಿ ಮಾತ್ರ ಕಪಟ ಜಂಗಮವೇಷಧಾರಿಯಾಗಿ ಬರುವ ಕಳ್ಳನಿಗೆ ಮನ್ನಣೆ ಸಿಕ್ಕುವುದಿಲ್ಲ. ಪರಿಶುದ್ಧವಿಲ್ಲದ, ಕೊಳಕು ಮನಸ್ಸಿನ ವ್ಯಕ್ತಿಯ ಹಣೆಯ ಮೇಲಿರುವ ವಿಭೂತಿ 'ನೀರಿಂಗೆ ನೈದಿಲೆಯಾಗಿ, ಗಗನಕ್ಕೆ ಚಂದ್ರಮನಾಗಿ, ಸಮುದ್ರಕ್ಕೆ ತೆರೆಯಾಗಿ' ಪರಿಶೋಭಿಸುವುದಿಲ್ಲ; ಒಲೆಯ ಬೂದಿಯಾಗಿ ಕಾಣಿಸುತ್ತದೆ. ಒಳಹೊರಗೆ ಒಂದಾಗದ ಅವರ ಡಾಂಭಿಕ ನಡವಳಿಕೆಯಿಂದ ಅಸಹ್ಯಗೊಂಡು ಮೂದಲಿಕೆಗೆ ಕಾರಣವಾಗುತ್ತದೆ.

**ಕತ್ತೆ ಬೂದಿಯ ಹೊರಳಿ । ಭಕ್ತನಂತಾಗುವುದೆ**
**ತತ್ವವರಿಯದಲೆ ಭಸಿತವಿಟ್ಟರೆ ಶುದ್ಧ**
**ಕತ್ತೆಯಂತಕ್ಕು ಸರ್ವಜ್ಞ ॥**

ಇನ್ನೊಂದೆಡೆ ವಿಭೂತಿ ಧರಿಸಿದ ಮಾತ್ರಕ್ಕೆ ಕೈಲಾಸಕ್ಕೆ ಹೋಗಬಹುದಾದರೆ ಯಾವಾಗಲೂ ಬೂದಿಗುಡ್ಡೆಯಲ್ಲಿ ಹೊರಳಾಡುವ ಕತ್ತೆ ಎಲ್ಲರಿಗಿಂತ ಮೊದಲು ಕೈಲಾಸಕ್ಕೆ ಹೋಗಬೇಕಾಗುತ್ತಿತ್ತು ಎನ್ನುತ್ತಾನೆ ಸರ್ವಜ್ಞ. ಜಗತ್ತಿನಲ್ಲಿ ಶ್ವೇತ ವರ್ಣ ಪರಿಶುದ್ಧತೆಯ ಕುರುಹು. ಕ್ರೈಸ್ತಧರ್ಮದ ನವವಧು ಮದುವೆಯ ಸಂದರ್ಭದಲ್ಲಿ ಅಡಿಯಿಂದ ಮುಡಿಯವರೆಗೆ ಶ್ವೇತವಸ್ತ್ರಧಾರಿಯಾಗಿರುತ್ತಾಳೆ. ಶ್ವೇತವಸ್ತ್ರ ಆಕೆಯ ಶುದ್ಧಚಾರಿತ್ರ್ಯವನ್ನು ಸಂಕೇತಿಸುತ್ತದೆ. ಅಂತೆಯೇ ಹಣೆಯ ಮೇಲೆ ಧರಿಸಿದ ವಿಭೂತಿ ಮನಸ್ಸಿನ ಪರಿಶುದ್ಧತೆಯ ಸಂಕೇತ. ಆದರೆ ಅದು ಈಗ ಹೊಟ್ಟೆ ತುಂಬಿದ ಸಂಕೇತವಾಗಿದೆ. ಯಾರಾದರೂ ಸ್ನೇಹಿತರು ದಾರಿಯಲ್ಲಿ ಬರುವಾಗ ಅವರ ಹಣೆಯ ಮೇಲೆ ವಿಭೂತಿ ಇದ್ದರೆ ಅವರು ಪೂಜೆ ಮುಗಿಸಿಕೊಂಡು ಬಂದಿರಬೇಕೆಂದು ಪರಿಭಾವಿಸದೆ 'ಓಹೋ, ಏನು ಗೌಡರು ಆಗಲೇ ಎಲ್ಲೋ ಭರ್ಜರಿ ಊಟ ಮಾಡಿಕೊಂಡು ಬಂದಿರುವಂತೆ ಕಾಣಿಸುತ್ತದೆ' ಎಂದು ಉದ್ಗರಿಸುವುದನ್ನು ನೀವು ಕೇಳಿರಬಹುದು!

ಜಗತ್ತಿನ ಯಾವುದೇ ದೇಶದ ರಾಷ್ಟ್ರಧ್ವಜಕ್ಕೆ ಅದರಲ್ಲಿರುವ ಬಣ್ಣ ಮತ್ತು ಚಿಹ್ನೆಗಳಿಗೆ ಸಾಂಕೇತಿಕ ಅರ್ಥ ಇರುವಂತೆ ಯಾವುದೇ ಧಾರ್ಮಿಕ ಲಾಂಛನ ಅಥವಾ ಆಚರಣೆಯ ಹಿಂದೆ ಅದರದೇ ಆದ ತಾತ್ವಿಕ ಅರ್ಥ ಅಡಗಿರುತ್ತದೆ. ಆದರೆ ಆ ಅರ್ಥ ಈಗ ವ್ಯವಹಾರದಲ್ಲಿ ಉಳಿದಿಲ್ಲ. ಉದಾಹರಣೆಗೆ ದೈನಂದಿನ ಜೀವನದಲ್ಲಿ

ಬಳಕೆಯಲ್ಲಿರುವ 'ನಾಮ ಹಾಕುವುದು, ಟೋಪಿ ಹಾಕುವುದು' ಇತ್ಯಾದಿ ಶಬ್ದಪ್ರಯೋಗಗಳು. 'ಟೋಪಿ ಧರಿಸುವುದು, ನಾಮ ಧರಿಸುವುದು' ಎಂದು ಹೇಳಿದಾಗ ಸ್ಫುರಿಸುವ ಅರ್ಥವೇ ಬೇರೆ 'ಟೋಪಿ ಹಾಕುವುದು, ನಾಮ ಹಾಕುವುದು' ಎಂದಾಗ ಧ್ವನಿಸುವ ಅರ್ಥವೇ ಬೇರೆ. ಇಂದು ನಾಗರಿಕ ಸಮಾಜದಲ್ಲಿ ಕುಡಿಯುವುದು ಎಂದರೆ ಹೆಂಡ, ಸಾರಾಯಿ ಕುಡಿಯುವುದು ಎಂದು ಹೇಗೆ ಅಪಾರ್ಥ ಉಂಟಾಗಿದೆಯೋ ಹಾಗೇನೆ 'ಟೋಪಿ ಹಾಕುವುದು, ನಾಮ ಹಾಕುವುದು' ಎಂದರೆ 'ಮೋಸ ಮಾಡುವುದು, ವಂಚನೆ ಮಾಡುವುದು' ಎಂದೇ ಅರ್ಥ. ಇದೇ ಅರ್ಥ ಹಿಂದೀ ಭಾಷೆಯಲ್ಲಿಯೂ ಇದೆ: 'ಉಸ್‌ಸೇ ಸಾವಧಾನ್ ರಹನಾ, ನಹೀಂ ತೋ ವಹ್ ಟೋಪೀ ಪಹನಾದೇಗಾ' (ಅವನಿಂದ ಎಚ್ಚರವಾಗಿರು, ಇಲ್ಲದಿದ್ದರೆ ಟೋಪಿ ಹಾಕುತ್ತಾನೆ). ಈ ಹೀನಾರ್ಥ ಹೇಗೆ ಬಂತೆಂದು ಎಷ್ಟೇ ಚಿಂತಿಸಿದರೂ, ಅನೇಕ ಭಾಷಾತಜ್ಞರನ್ನು ಮತ್ತು ಗಾಂಧಿವಾದಿಗಳನ್ನು ಸಂಪರ್ಕಿಸಿದರೂ ಗೊತ್ತಾಗಲಿಲ್ಲ. ಒಂದಂತೂ ಖಚಿತ: ಇವುಗಳಲ್ಲಿ ಕಾಲಮಾನದ ದೃಷ್ಟಿಯಿಂದ ಟೋಪಿ ಹಾಕುವುದಕ್ಕಿಂತ ಮುಂಚೆ ನಾಮ ಹಾಕುವುದು ಇದ್ದಿರಬೇಕು. ಸ್ವಾತಂತ್ರ್ಯಪೂರ್ವಕಾಲದಲ್ಲಿ ಟೋಪಿ ದೇಶಭಕ್ತಿಯ ದ್ಯೋತಕವಾಗಿತ್ತು. ಅದು ಕ್ರಮೇಣ 'ಬಂದ ಇವನೊಬ್ಬ ದೇಶಭಕ್ತ' ಎಂಬ ಅಣಕಕ್ಕೆ ಗುರಿಯಾಯಿತು. ಅಷ್ಟೇ ಆಗಿದ್ದರೆ ಸಮಾಧಾನಪಟ್ಟುಕೊಳ್ಳಬಹುದಾಗಿತ್ತು. ಆದರೆ ಸ್ವಾತಂತ್ರ್ಯೋತ್ತರ ಕಾಲದ ರಾಜಕೀಯದಲ್ಲಿ ಅದಕ್ಕೆ ಬಂದ ಪರಿಮಾರ್ಜಿತ (revised) ಅರ್ಥ ತೀರಾ ಅಸಹನೀಯ. ಮೈಸೂರು ಪೇಟದ ಪುಣ್ಯವೋ ಏನೋ 'ಟೋಪಿ ಹಾಕುವುದು' ಎಂದಾಗ ಬರುವ ಹೀನಾರ್ಥ ಸದ್ಯ 'ಪೇಟ ಹಾಕುವುದು' ಎಂದಾಗ ಇಲ್ಲ! ಇಂದು ತಲೆಯ ಮೇಲೆ ಬಿಳಿಯ ಟೊಪ್ಪಿಗೆಗಳು ಕಾಣಸಿಗುವುದು ಹೆಚ್ಚಾಗಿ ಹಳ್ಳಿಯ ಅವಿದ್ಯಾವಂತರಲ್ಲಿ, ಪೇಟೆಯ ವಿದ್ಯಾವಂತರಲ್ಲಿ ಅಲ್ಲ. ಆಧುನಿಕ 'ವಿದ್ಯಾವಂತರು' ಕೆಲವರು ಬೇರೊಬ್ಬರ ತಲೆಯ ಮೇಲೆ ಕಣ್ಣಿಗೆ ಕಾಣದ ಟೋಪಿಗಳನ್ನು (invisible caps) ಹಾಕುವ ಕೈಚಳಕವುಳ್ಳ ಜಾದೂಗಾರರಾಗಿದ್ದಾರೆ. ಅವರು ಹಾಕುವ ಟೋಪಿ ಗಲ್ಲಿಗೇರಿಸುವ ಮುನ್ನ ಕೈದಿಯ ಮುಖಕ್ಕೆ ಹೊದಿಸುವ ಕಪ್ಪುಮುಖವಾಡ (Black Hood) ದಂತಿರುತ್ತದೆ. ವ್ಯತ್ಯಾಸವೆಂದರೆ ಅದು ತನ್ನ ತಲೆಯ ಮೇಲಿದೆಯೆಂದು ಗೊತ್ತಾಗುವ ವೇಳೆಗೆ ಟೋಪಿಹಾಕಿಸಿಕೊಂಡವನು ಸತ್ತಿರುತ್ತಾನೆ ಇಲ್ಲವೇ ದಿವಾಳಿಯಾಗಿರುತ್ತಾನೆ!

ಕನ್ನಡಕ್ಕೆ ಶಾಸ್ತ್ರೀಯಸ್ಥಾನಮಾನ ಕೊಟ್ಟಿರುವ ಹಿನ್ನೆಲೆಯಲ್ಲಿ ಕೇಂದ್ರಸರಕಾರ ಮೋಸಮಾಡಿದೆಯೆಂದು ಮೊನ್ನೆ ಮೊನ್ನೆ ಮೈಸೂರು ಸಮೀಪದ ಚಾಮರಾಜನಗರ ಜಿಲ್ಲೆಯ ಕನ್ನಡ ಚಳುವಳಿಗಾರರು ಹಣೆಯ ಮೇಲೆ, ಹೊಟ್ಟೆಯ ಮೇಲೆ ಮೂರು ನಾಮ ಬಳಿದುಕೊಂಡು ಬೀದಿಯಲ್ಲಿ ಪ್ರತಿಭಟನೆ ಮಾಡಿದರು. ಇದು ಒಂದರ್ಥದಲ್ಲಿ ಧಾರ್ಮಿಕ ಚಿಹ್ನೆಗಳಿಗೆ ಮಾಡಿದ ಅಗೌರವವೆಂದು ಪರಿಭಾವಿಸಬಹುದಾದರೂ, ಕನ್ನಡ ಭಾಷೆಯಲ್ಲಿ 'ನಾಮ ಹಾಕುವುದು' ಎಂಬ ನುಡಿಗಟ್ಟಿಗೆ ಹೀನಾರ್ಥ ಹೇಗೋ ಬಂದುಬಿಟ್ಟಿದೆ. ಹೀಗಾಗಿ ಈ ರೀತಿಯ ಪ್ರತಿಭಟನೆಗಳಿಂದ ತಮ್ಮ ಧಾರ್ಮಿಕ ನಂಬುಗೆಗಳಿಗೆ ಅವಮಾನ ಉಂಟಾಯಿತೆಂದು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ.

ಜನರ ಅಂತರಂಗದ ಆತ್ಮವಿಕಾಸಕ್ಕೆ ದಾರಿ ಮಾಡಿಕೊಡಬೇಕಾಗಿದ್ದ ಧಾರ್ಮಿಕ ಲಾಂಛನಗಳು ಮತ್ತು ಚಿಹ್ನೆಗಳು ಕಾಲಕ್ರಮೇಣ ಜನರ ಮಧ್ಯೆ ಸಂಘರ್ಷಕ್ಕೂ ಕಾರಣವಾಗಿ ಪರಿಣಮಿಸಿದ್ದು ಇತಿಹಾಸದಲ್ಲಿ ಕಂಡುಬರುವ ಒಂದು ವಿರೋಧಾಭಾಸ! ಶ್ರೀವೈಷ್ಣವರಲ್ಲಿ 'ವಡಗಲೈ' ಮತ್ತು 'ತೆಂಗಲೈ' ಎಂಬ ಎರಡು ಪಂಗಡಗಳಿವೆ. ವಡಗಲೈ ಸಂಪ್ರದಾಯದವರು ಇಂಗ್ಲಿಷ್ ಅಕ್ಷರ 'U' ಆಕಾರದ ನಾಮ ಹಾಕಿಕೊಂಡರೆ, ತೆಂಗಲೈ ಸಂಪ್ರದಾಯದವರು 'Y' ಆಕಾರದ ನಾಮ ಹಾಕಿಕೊಳ್ಳುತ್ತಾರೆ. ತಮಿಳುನಾಡಿನ ಕಾಂಚೀಪುರಂನಲ್ಲಿರುವ ವರದರಾಜ ಪೆರುಮಾಳ್ ದೇವಸ್ಥಾನದ ಆನೆಗೆ 'ವಡಗಲೈ' ಸಂಪ್ರದಾಯದ ಪ್ರಕಾರ ನಾಮ ಹಾಕಬೇಕೋ, 'ತೆಂಗಲೈ' ಸಂಪ್ರದಾಯದ ಪ್ರಕಾರ ನಾಮ ಹಾಕಬೇಕೋ ಎಂಬ ವಿಚಾರದಲ್ಲಿ ಎರಡೂ ಪಂಗಡಗಳ ಮಧ್ಯೆ ಉಂಟಾದ ವಿವಾದ ಸುಪ್ರೀಂ ಕೋರ್ಟ್‌ವರೆಗೂ ಹೋಯಿತು. ವಾದಪ್ರತಿವಾದಗಳನ್ನು ಆಲಿಸಿದ ಸುಪ್ರೀಂಕೋರ್ಟ್ ಎರಡೂ ಸಂಪ್ರದಾಯಗಳ ಪ್ರಕಾರ ಆನೆಗೆ ದಿನ ಬಿಟ್ಟು ದಿನ (alternate days/years?) ನಾಮ ಹಾಕಬೇಕೆಂದು ತೀರ್ಮಾನ ನೀಡಿತಂತೆ. ದಿನವೂ ಹಣೆಯನ್ನು ಉಜ್ಜಿ ಉಜ್ಜಿ ಬೇರೆ ನಾಮ ಹಾಕುವ ಅವಾಂತರದಲ್ಲಿ ಆನೆಯೇ ಸತ್ತುಹೋಯಿತು ಎಂಬ ವದಂತಿಯೂ ಇದೆ. ಸ್ವಾತಂತ್ರ್ಯಪೂರ್ವದಲ್ಲಿ ಇಂಥದೇ ಒಂದು ಕೇಸು ಲಂಡನ್ನಿನ ಪ್ರೀವಿಕೌನ್ಸಿಲ್‌ವರೆಗೆ ಹೋಗಿತ್ತೆಂದು ಎಲ್ಲಿಯೋ ಓದಿದ ನೆನಪು. ಇದೇ ರೀತಿ ಕರ್ನಾಟಕದ ಮೇಲುಕೋಟೆಯಲ್ಲಿರುವ ಯೋಗಾನರಸಿಂಹ ದೇವರಿಗೆ ಯಾವ ಸಂಪ್ರದಾಯದ ಪ್ರಕಾರ ನಾಮ ಹಾಕಬೇಕೆಂಬ ವಿಚಾರದಲ್ಲಿ ಉಂಟಾಗಿರುವ ವಿವಾದ ಈಗ ಹಾಲಿ ಉಚ್ಚ ನ್ಯಾಯಾಲಯದಲ್ಲಿದೆ. ಈ ನಾಮದ ವಿಚಾರವಾಗಿ ಅಂತರಜಾಲದಲ್ಲಿ ನಡೆದ ಈ ಮುಂದಿನ ಚರ್ಚೆ ಸ್ವಾರಸ್ಯಕರವಾಗಿದೆ:

- **ಅಲ್ಲಾ ರೀ, ನಾವು ದೇವರಿಗೆ ಯಾಕೆ ಮನುಷ್ಯರಿಗೂ ಸಖತ್ತಾಗಿ ನಾಮ ಹಾಕ್ತೀವಿ. ಅದರಲ್ಲಿ ಎತ್ತಿದ ಕೈ ನಮ್ಮದು. ಅಂಥಾ ಎತ್ತಿದ ಕೈನಲ್ಲಿ ದೇವರಿಗೆ ಯಾವ ಥರ ನಾಮ ಹಾಕಿದ್ರೆ ಏನ್ರೀ ವ್ಯತ್ಯಾಸ? ನಾಮ ಹಾಕೋದು ತಾನೆ ಮುಖ್ಯ?**

- **ಪಾಪ, ಆ ಕಲ್ಲು ಮೂರ್ತಿ ನಾವು ತಿದ್ದಿ ತಿದ್ದಿ ಹಾಕಿದ ನಾಮ ಹಾಕಿಸಿಕೊಂಡು ಸುಮ್ಮನೆ ಮಾತನಾಡದೆ ನಿಂತಿದೆ. ಹಾಕೋವ್ರು ಹಾಕ್ತಾನೆ ಇರ್ತಾರೆ. ಪಾಪ ಪುಣ್ಯಾತ್ಮ ದೇವರು ಯಾವ ಯುಗದಲ್ಲಿ ಯಾವ ಪಾಪ ಮಾಡಿದನೋ, ಈ ಕಲಿಯುಗದಲ್ಲಿ ಕಂಡಕಂಡವರ ಹತ್ತಿರ ನಾಮ ಹಾಕಿಸಿಕೊಳ್ಳಬೇಕು..... ನಾಮ ಹಾಕಿಸಿಕೊಳ್ಳುವುದಕ್ಕೂ ಸಹ ನ್ಯಾಯಾಲಯದ ಕಟಕಟೆ ಹತ್ತಬೇಕಾ?**
- **ಅವರಿಗೆ U ಮತ್ತು Y ಒಟ್ಟಿಗೇ ಇರೋ LED Blinker ಹಾಕಿಬಿಡಿ. (ಆಧುನಿಕ ತಂತ್ರಜ್ಞಾನದ ಈ ಸೌಲಭ್ಯ ಭಕ್ತರನ್ನು ತೃಪ್ತಿಪಡಿಸಲಿಕ್ಕೋ, ದೇವರನ್ನು ತೃಪ್ತಿಪಡಿಸಲಿಕ್ಕೋ!)**
- **ದೇವರಿಗೆ ಯಾವ ರೀತಿಯ ನಾಮ ಆದರೇನಂತೆ! ನ್ಯಾಯಾಲಯಗಳ ತೀರ್ಪಿಗೆ ಕಾಯುವುದಕ್ಕಿಂತ ನಿನಗೆ ಯಾವ 'ನಾಮ' ಇಷ್ಟವೆಂದು ದೇವರನ್ನೇ ಏಕೆ ಕೇಳಬಾರದು?**
- **ದೇವರನ್ನು ಸುಮ್ಮನೆ ತನ್ನ ಪಾಡಿಗೆ ತಾನು ಇರಲು ಏಕೆ ಬಿಡಬಾರದು?**
- **ದೇವರಿಗೆ ತೆಂಗಲೈ ನಾಮನಾದರೂ ಹಾಕಲಿ, ವಡಗಲೈ ನಾಮಾನಾದರೂ ಹಾಕಲಿ. ಆದರೆ ಭಕ್ತಾದಿಗಳಿಗೆ ಮಾತ್ರ ನಾಮ ಹಾಕೋದು ಬೇಡ ಸ್ವಾಮಿ!**

ಇಂತಹ ಕಟಕಿಯ ಮಾತುಗಳಿಗೆ ಮತ್ತು ಅಪಹಾಸ್ಯಕ್ಕೆ ಅವಕಾಶಮಾಡಿಕೊಡುವಂತೆ ವಿಭೂತಿ, ನಾಮ ಇತ್ಯಾದಿ ನಮ್ಮ ಧಾರ್ಮಿಕ ಲಾಂಛನಗಳು ಮತ್ತು ಆಚರಣೆಗಳು ಕರ್ಮಠತನದ ಸುಳಿಯಲ್ಲಿ ಸಿಲುಕಿ ತಮ್ಮ ತಾತ್ವಿಕನೆಲೆಗಟ್ಟನ್ನು ಕಳೆದುಕೊಳ್ಳುತ್ತಿರುವುದು ಒಂದು ದುರಂತವಲ್ಲವೇ?

**25.2.2009**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑